ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆ ಮಾಡುವುದಕ್ಕೆ ದಯಮಾಡಿ ತಾವು ಅರಕಲಗೂಡು ಪಟ್ಟಣದಲ್ಲಿರುವ ತಹಶೀಲ್ದಾರ ಕಛೇರಿ ಎದುರಿನ ಜಾಗದಲ್ಲಿ permission ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಆ ಪ್ರಸ್ತಾವನೆ ತಹಶೀಲ್ದಾರರ ಆಫೀಸ್‌ಗೆ ಬಂದರೆ ನಾನು ಅಗತ್ಯ ಅನುಮತಿ ಕೊಡುತ್ತೇನೆ.

ಶ್ರೀ ಎ. ಮಂಜು : ಈಗಾಗಲೇ ಪ್ರಸ್ತಾವನೆ ಡಿ.ಸಿ. ಆಫೀಸ್‌ಗೆ ಬಂದಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಡಿ.ಸಿ. ಆಫೀಸ್‌ನಿಂದ ನನಗೆ ಬರಲಿ, ಅಗತ್ಯ ಅನುಮತಿ ಕೊಡುತ್ತೇನೆ. ಬೆಳಗ್ಗೆ ನಂಜೇಗೌಡರದ್ದು ಕೊಟ್ಟ ರೀತಿ ಇದನ್ನೂ ಕೊಡುತ್ತೇವೆ.

ಶ್ರೀ ಎ.ಮಂಜು : ಆಯಿತು.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರು ಮಾತನಾಡುವುದು.

ಶ್ರೀ ಕಿಮ್ಮನೆ ರತ್ನಾಕರ್ : ಕೆ.ಸಿ. ರೆಡ್ಡಿಯವರದ್ದು ಕೊಡುವುದಿಲ್ಲವೇ?

ಶ್ರೀ ಎಸ್. ಸುರೇಶ್ ಕುಮಾರ್ : ಅರಕಲಗೂಡಿನದ್ದು. . . . .

ಶ್ರೀ ಕಿಮ್ಮನೆ ರತ್ನಾಕರ್ : ಕೆ.ಸಿ. ರೆಡ್ಡಿಯವರ ಪುತ್ಥಳಿಯನ್ನೇ ವಿಧಾನ ಸೌಧದ ಬಳಿ ಇವತ್ತಿನವರೆಗೂ ಹಾಕುವುದಕ್ಕೆ ಆಗುತ್ತಿಲ್ಲ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ. ಮಾನ್ಯ ಕರಡಿ ಸಂಗಣ್ಣನವರು ಮಾತನಾಡುವುದು.

15) **ವಿಷಯ : ಡಾ.ಡಿ.ಎಂ.ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ವಿಷಯದ ಬಗ್ಗೆ**

ಶ್ರೀ ಕರಡಿ ಸಂಗಣ್ಣ : ಮಾನ್ಯ ಅಧ್ಯಕ್ಷರೆ, ಡಾ.ಡಿ.ಎಂ. ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ಕೊಪ್ಪಳ ಜಿಲ್ಲೆಯ ಕೊಪ್ಪಳ ನಗರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಲು ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಸುರೇಶ್‌ಕುಮಾರ್ ರವರು ಉತ್ತರ ನೀಡುವುದು.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,

ಉತ್ತರ ಕರ್ನಾಟಕದಲ್ಲಿ ಈಗಾಗಲೇ ಬಳ್ಳಾರಿ, ಬೀದರ್, ರಾಯಚೂರು ಹಾಗೂ ಬೆಳಗಾವಿಯಲ್ಲಿ ವೈದ್ಯಕೀಯ ಕಾಲೇಜುಗಳು ಅಸ್ತಿತ್ವದಲ್ಲಿವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಇ.ಎಸ್.ಐ. ವತಿಯಿಂದ ವೈದ್ಯಕೀಯ ಕಾಲೇಜು ಪ್ರಾರಂಭವಾಗಲಿದೆ. ಕೊಪ್ಪಳ ನಗರದಲ್ಲಿ ಹೊಸ ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು, ವೈದ್ಯಕೀಯ ಕಾಲೇಜು ಸ್ಥಾಪಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಕೊಪ್ಪಳ ಇವರಿಂದ ವರದಿ ಪಡೆಯಲಾಗಿದೆ. ಭಾರತೀಯ ವೈದ್ಯಕೀಯ ಪರಿಷತ್ತಿನ (MCI) ನಿಯಮಾವಳಿಯನ್ವಯ ಈ ಸೌಕರ್ಯಗಳು ಲಭ್ಯವಿರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಕೊಪ್ಪಳ ನಗರದಲ್ಲಿ ಹೊಸ ವೈದ್ಯಕೀಯ ಕಾಲೇಜು ಆರಂಭಿಸುವುದ ಕ್ಕೋಸ್ಕರ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ವೈದ್ಯಕೀಯ ಕಾಲೇಜು ಸ್ಥಾಪಿಸುವುದಕ್ಕೆ ಏನು ಮೂಲಭೂತ ಸೌಲಭ್ಯವಿರುವ ಬಗ್ಗೆ ನಾವು ವರದಿಯನ್ನೂ ತರಿಸಿಕೊಂಡಿದ್ದೇವೆ. ಮಾನ್ಯ ಕರಡಿ ಸಂಗಣ್ಣನವರು ವಿಶೇಷವಾಗಿ ಹಿಂದುಳಿದ ಪ್ರದೇಶದಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭಿಸಬೇಕೆಂದು ಏನು ಹೇಳಿದ್ದಾರ, ಅದರ ಬಗ್ಗೆ ನಮ್ಮ ಭಾರತೀಯ ವೈದ್ಯಕೀಯ ಪರಿಷತ್ತು (MCI) ನ ನಿಯಮಾನುಸಾರವಾಗಿ ಅಗತ್ಯವಿರುವ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕರಡಿ ಸಂಗಣ್ಣ : ಮಾನ್ಯ ಅಧ್ಯಕ್ಷರೆ, ಪ್ರಸ್ತಾವನೆ ಅಂಗೀಕರಿಸಲಾಗಿದೆ ಎಂದು ಹೇಳಿದ್ದಾರ್ರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದಷ್ಟು ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ನಮ್ಮದು ಬಹಳಷ್ಟು ಹಿಂದುಳಿದ ಪ್ರದೇಶ. ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಜಿಲ್ಲೆಗಳಲ್ಲಿಯೂ ಹಿಂದುಳಿದ ತಾಲ್ಲೂಕುಗಳಿವೆ.....

ಅಧ್ಯಕ್ಷರು : ಪ್ರಸ್ತಾವನೆ ಬಂದ ಮೇಲೆ ಮಾಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಕರಡಿ ಸಂಗಣ್ಣ : ಈಗಾಗಲೇ ಪ್ರಸ್ತಾವನೆಯನ್ನು ತರಿಸಿಕೊಂಡಿದ್ದಾರೆ. ಅಲ್ಲಿ ಮೂಲಭೂತ ಸೌಲಭ್ಯ ಕೂಡ, 750 ಹಾಸಿಗೆಯ ಆಸ್ಪತ್ರೆ ನಿರ್ಮಾಣವಾಗಿದೆ. MCI norms ಏನಿದೆ ಅದರ ಪ್ರಕಾರ imbalance ಸರಿ

ಮಾಡತಕ್ಕಂಥ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಆಗಬೇಕಾಗಿದೆ. ದಯಮಾಡಿ ಮುಂದಿನ ದಿನಗಳಲ್ಲಿ ಕೊಪ್ಪಳ ತಾಲ್ಲೂಕಿನಲ್ಲಿ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಬೇಕಾಗಿ ಮಾನ್ಯ ಕಾನೂನು ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ. ಇದರ ಬಗ್ಗೆ ಕಾನೂನು ಸಚಿವರು ಹೇಳಬೇಕು.

ಅಧ್ಯಕ್ಷರು : ಮಾನ್ಯ ಸುರೇಶ್ ಕುಮಾರ್‌ರವರೆ, ಇನ್ನೊಂದು ಬಾರಿ ಹೇಳಿ.

ಶ್ರೀ ಕರಡಿ ಸಂಗಣ್ಣ : ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವಂತಹ ಜಿಲ್ಲೆಯಲ್ಲಿ ಗುಲ್ಬರ್ಗಾ, ಬಳ್ಳಾರಿ, ರಾಯಚೂರು ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಇದೆ. ಆದರೆ ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಮಾಡಿಲ್ಲ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಗುಲ್ಬರ್ಗಾ ಜಿಲ್ಲೆಯ ಲ್ಲೊಂದು ಸರ್ಕಾರಿ ಮೆಡಿಕಲ್ ಕಾಲೇಜು ಬೇಕು.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾವು ಇಡೀ ಕರ್ನಾಟಕಕ್ಕೆ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಕರಡಿ ಸಂಗಣ್ಣ : ಅಲ್ಲ, imbalance, ಡಾ. ನಂಜುಂಡಪ್ಪ ವರದಿಯಲ್ಲಿ ಏನು ಹೇಳುತ್ತಾರೆ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಬಳ್ಳಾರಿ, ಬೀದರ್, ರಾಯಚೂರಿನಲ್ಲಿ ಈಗಾಗಲೇ ಮೆಡಿಕಲ್ ಕಾಲೇಜ್‌ಗಳಿವೆ. ಗುಲ್ಬರ್ಗಾದಲ್ಲಿ ಇವತ್ತಿನಿಂದಲೇ ESI ಮೆಡಿಕಲ್ ಕಾಲೇಜ್ ಪ್ರಾರಂಭವಾಗಿದೆ. ಕೊಪ್ಪಳದಲ್ಲಿ ಬೇಕು ಎನ್ನುವುದು ಒಂದು ಬಹಳ ನ್ಯಾಯಯುತವಾದ ಬೇಡಿಕೆ. ಈಗಾಗಲೇ ಮೂಲಭೂತ ಸೌಲಭ್ಯದ ಬಗ್ಗೆ ವರದಿ ತರಿಸಿಕೊಂಡಿದ್ದೇವೆ. ಆ ಹಿನ್ನೆಲೆಯಲ್ಲಿ MCI regulation ಪ್ರಕಾರ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಕೊಡಗಿನಲ್ಲಿಯೂ ಮೆಡಿಕಲ್ ಕಾಲೇಜು ಇಲ್ಲ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಗೂ ಕೂಡ ಮೆಡಿಕಲ್ ಕಾಲೇಜು ಬೇಕಾಗುತ್ತದೆ. ESI ನಲ್ಲಿ ಎಲ್ಲರಿಗೂ admission ಸಿಗುವುದಿಲ್ಲ. ಇದರ ಬಗ್ಗೆ ನಾನು ಎರಡು-ಮೂರು ಬಾರಿ ಪ್ರಸ್ತಾಪ ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ರಾಜು. ಕೆ : ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಅಧ್ಯಕ್ಷರು : ಮಾನ್ಯ ರಾಜುರವರೆ ದಯವಿಟ್ಟು ಕುಳಿತುಕೊಳ್ಳಿ, ಕರೆಯುವಾಗ ಬರುವುದಿಲ್ಲ. ಈಗ ಎದ್ದು ನಿಂತುಕೊಳ್ಳುತ್ತೀರಿ, ನೀವು ಕರೆಯುವಾಗ ಇರಲಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಕಾಕಾಸಾಹೇಬ ಪಾಂಡುರಂಗ ಪಾಟೀಲ್ ರವರು ಮಾತನಾಡುವುದು.

16) ವಿಷಯ : ನಿಪ್ಪಾಣಿ ಪುರಸಭೆಯ ಹಿಂದಿನ ಅಧ್ಯಕ್ಷರು ಹಾಗೂ ಆಯುಕ್ತರು ಅಧಿಕಾರ ದುರುಪಯೋಗ ಮಾಡಿ ಕೊಂಡು ಸಾರ್ವಜನಿಕ ಆಸ್ತಿಗೆ ನಷ್ಟ ಉಂಟು ಮಾಡಿರುವ ಬಗ್ಗೆ

ಶ್ರೀ ಕಾಕಾಸಾಹೇಬ ಪಾಂಡುರಂಗ ಪಾಟೀಲ್ : ನಿಪ್ಪಾಣಿ ನಗರ ಸಭೆಯ ಮಾಜಿ ಅಧ್ಯಕ್ಷರು ಹಾಗೂ ಆಯುಕ್ತರು ಸೇರಿ ನಿಪ್ಪಾಣಿ ನಗರದ ಬಹುತೇಕ heart of city ಅಶೋಕನಗರದಲ್ಲಿ ಉದ್ಯಾನವನಕ್ಕಾಗಿ ಜಾಗ ಬಿಡಲಾಗಿತ್ತು. ಅದನ್ನು ಯಾರ ಗಮನಕ್ಕೂ ತರದೇ ಹೈಕೋರ್ಟ್‌ನಲ್ಲಿ ಭೂ ಮಾಲೀಕರ ಜೊತೆಯಲ್ಲಿ ಒಪ್ಪಂದ ಮಾಡಿ, 52,000 ಚದರ ಅಡಿಗಳ ಜಾಗ ಭೂ ಮಾಲೀಕರು ಬಿಟ್ಟುಕೊಟ್ಟರು. ಇದರ ಬಗ್ಗೆ ಮಾನ್ಯ ಪೌರಾಡಳಿತ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ...